ಶ್ರೀ ವಿಶ್ವೇಶ್ವರ ಹೆಗೆಡೆ ಕಾಗೇರಿ : ಅಲ್ಲಿ ಅರ್ಧ ಭಾಗ ಶಿಫ್ಟ್ ಆಗುತ್ತದೆ ಇನ್ನರ್ಧ ಭಾಗ ಶಿಫ್ಟ್ ಆಗುವುದಿಲ್ಲ. ಅದು ಇದ್ದಲ್ಲೇ ಇರುತ್ತದೆ. ಹೀಗಾದಾಗ ಅಂಗನವಾಡಿ ಮೊದಲಿನ ಭಾಗದಲ್ಲೇ ಇರುತ್ತದೆ. ಉಳಿದ ಅರ್ಧದ ಭಾಗದಲ್ಲಿ ಇರುವುದಿಲ್ಲ. ಈ ರೀತಿಯ ಅನೇಕ ಗೊಂದಲಗಳಿವೆ.

ಅಧ್ಯಕ್ಷರು : ಎಲ್ಲೆಲ್ಲಿ ಮುಳುಗಡೆ ಪ್ರದೇಶಗಳಿವೆಯೋ ಅಂತಹ ಕಡೆ ಹೆಚ್ಚಿನ ಗಮನ ಕೊಡಿ.

ಶ್ರೀ ಪಿ.ಹೆಚ್. ಪೂಜಾರ್ : ಒಂದು ಹಳ್ಳಿ ಶಿಫ್ಟ್ ಆಗಬೇಕಾದರೆ ಅದು 6 -7 ವರ್ಷಗಳ ಒಂದು ಕಂಟಿನ್ಯೂಯಸ್ ಪ್ರೊಸೆಸ್ ಆಗಿದೆ. ಅದು ಒಂದೇ ಬಾರಿಗೆ ಶಿಫ್ಟ್ ಆಗುವುದಿಲ್ಲ.

ಶ್ರೀಮತಿ ಮೋಟಮ್ಮ : ಆ ಬಗ್ಗೆ ನಾನು ಪ್ರಯತ್ನ ಮಾಡುತ್ತೇನೆ.

ಶಿವಮೊಗ್ಗದಲ್ಲಿರುವ ಸಾರಿಗೆ ಸಂಸ್ಥೆಯ ಆದಾಯ

422 - ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದಲ್ಲಿ ಇರುವ ಸಾರಿಗೆ ಸಂಸ್ಥೆಯಿಂದ 1999-2000 ಹಾಗೂ 2000-01ನೇ ಸಾಲಿನಲ್ಲಿ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು? ಈ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮಗಳಿಗೇನಾದರೂ ಹಣ ಬಿಡುಗಡೆಯಾಗಿದೆಯೇ? ಹಾಗೂ ಸಾರಿಗೆ ಸಂಸ್ಥೆಯ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ದಾವಣಗೆರೆ ವಿಭಾಗದ ಶಿವಮೊಗ್ಗ ಘಟಕವು 1999-2000ನೇ ಸಾಲಿನಲ್ಲಿ ರೂ.1643.04 ಲಕ್ಷ ಸಾರಿಗೆ ಆದಾಯವನ್ನು ಹಾಗೂ 2000-2001ನೇ ಸಾಲಿನಲ್ಲಿ (31ರ ಆಗಸ್ಟ್ ವರೆಗೆ) ರೂ. 761.20 ಲಕ್ಷ ರೂಪಾಯಿಗಳ ಆದಾಯವನ್ನು ಗಳಿಸಿರುತ್ತದೆ.

ಪ್ರಯಾಣ ದರ ಅಗತ್ಯತೆಗಳನ್ನು ಪರಿಶೀಲಿಸಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಂಸ್ಥೆಯು ಕೈಗೊಳ್ಳುತ್ತಲಿದ್ದು, ಪ್ರಸ್ತುತ ಶಿವಮೊಗ್ಗ ಬಸ್ ನಿಲ್ದಾಣದ ನಿಲುಗಡೆ ಪ್ರದೇಶವನ್ನು ಹಾಗೂ ಘಟಕದ ನಿಲುಗಡೆ ಪ್ರದೇಶವನ್ನು ಡಾಂಬರೀಕರಣಗೊಳಿಸಲು ಈ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಅವಕಾಶ ಮಾಡಲಾಗಿದೆ.

ಹಾಲಿ ಇರುವ ಡಿಪೋ ಮತ್ತು ಬಸ್ ಸ್ಟೇಷನ್ ಕಟ್ಟಡಗಳು ಅವಶ್ಯಕತೆಗೆ ಅನುಗುಣವಾಗಿರುವುದರಿಂದ ಹೊಸ ಕಟ್ಟಡ ನಿರ್ಮಾಣದ ಅವಶ್ಯಕತೆ ಇರುವುದಿಲ್ಲ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಶಿವಮೊಗ್ಗ ಡಿಪೋ ಕೂಡ ಈಗಾಗಲೇ ಬಹಳ ವಿಸ್ತಾರವಾಗಿ ಬೆಳೆಯುತ್ತಿದೆ. ಮಾನ್ಯ ಮಂತ್ರಿಗಳು ಮೊನ್ನೆ ತಾನೇ ಅದನ್ನು ನೋಡಿಕೊಂಡು ಬಂದಿದ್ದಾರೆ. ಆದರೆ ಅಲ್ಲಿ ಪ್ರೈವೇಟ್

ಬಸ್‌ಗಳಿಗೆ ಅನುಕೂಲವಾಗುವ ರೀತಿಯಲ್ಲಿ ಬಸ್ ಡಿಪೋದ ಪಕ್ಕದಲ್ಲಿಯೇ ಪ್ರೈವೇಟ್ ಬಸ್ ಸ್ಟ್ಯಾಂಡ್ ಒಂದನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅದಕ್ಕೆ ಆದಷ್ಟು ಜಾಗ್ರತೆ ಸರ್ಕಾರ ಮಾನ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸಂಬಂಧಪಟ್ಟಂತಹ ವಿಚಾರದಲ್ಲಿ ಅಭಿವೃದ್ಧಿ ಪಡಿಸುವುದರ ಬಗ್ಗೆ ಅವರು ಪ್ರಶ್ನೆ ಕೇಳಿದ್ದಾರೆ. ಅಲ್ಲಿನ ಪರಿಸ್ಥಿತಿಯನ್ನು ನಾನು ಸ್ವತಃ ವೀಕ್ಷಣೆ ಮಾಡಿದ್ದೇನೆ. ಅಲ್ಲಿ ಅಗತ್ಯತೆ ಇರುವಂತಹ ಎಲ್ಲಾ ಕೆಲಸಗಳನ್ನೂ ಕೂಡ ಮಾಡುವುದರ ಬಗ್ಗೆ ನಾವು ತೀರ್ಮಾನ ಮಾಡಿದ್ದೇವೆ. ಅದನ್ನು ಮುಂದಿನ ದಿನಗಳಲ್ಲಿ ಕಾರ್ಯಗತಗೊಳಿಸುತ್ತೇವೆ. ಖಾಸಾಗಿ ಬಸ್ ನಿಲ್ದಾಣವನ್ನು ನಿರ್ಮಿಸುವುದರ ಬಗ್ಗೆ ಕೂಡ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆ. ಅಲ್ಲಿ ಜಾಗದ ಲಭ್ಯತೆ ಇಲ್ಲದೇ ಇರುವುದರಿಂದ ಖಾಸಗಿ ಬಸ್ ನಿಲ್ದಾಣ ಆರಂಭಿಸುವ ಬಗ್ಗೆ ತಡವಾಗಿದೆ. ಆ ಬಗ್ಗೆ ಈಗಲೂ ಸಹಾ ಸರ್ಕಾರದ ಮುಂದೆ ಪ್ರಸ್ತಾವನೆ ಇದೆ. ಮುಂದಿನ ದಿನಗಳಲ್ಲಿ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಕೂಡ ಬಸ್ಸು ನಿಲ್ದಾಣ ಆರಂಭಿಸುವ ಪ್ರಸ್ತಾವನೆ ಇದೆ. ಅಲ್ಲಿ 6 ಎಕರೆ ಜಾಗ ಇದೆ. ಸಂಬಂಧಪಟ್ಟಂತಹ ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ಮತ್ತು ಡಿ.ಸಿ.ಯವರನ್ನು ಕರೆದುಕೊಂಡು ಹೋಗಿ ನಾವು ಆ ಜಾಗವನ್ನು ತೋರಿಸಿದ್ದೇವೆ. ಡಿ.ಸಿ.ಯವರು ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರು ಆ ಕಡೆಗೆ ತಕ್ಷಣ ಗಮನ ಹರಿಸಿ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಅನೇಕ ತಾಲ್ಲೂಕು ಕೇಂದ್ರಗಳಲ್ಲಿ ಅಗತ್ಯವಾಗಿ ಬಸ್ಸು ಘಟಕಗಳನ್ನು ಪ್ರಾರಂಭ ಮಾಡುವುದರ ಬಗ್ಗೆ ಅನೇಕ ಶಾಸಕ ಮಿತ್ರರುಗಳು ನನ್ನ ಮುಂದೆ ಪ್ರಸ್ತಾವನೆಗಳನ್ನು ಸಲ್ಲಿಸಿದ್ದಾರೆ. ನಮ್ಮ ಸಾರಿಗೆ ಸಂಸ್ಥೆಯಲ್ಲಿ ಕಟ್ಟಡ ನಿರ್ಮಾಣ ಮಾಡುವುದಕ್ಕಾಗಿ ವರ್ಷಕ್ಕೆ 7 ಕೋಟಿ ರೂಪಾಯಿಗಳು ಮಾತ್ರ ಹಣದ ಲಭ್ಯತೆ ಇರುತ್ತದೆ. ಆದರೆ ಅವರ ಬೇಡಿಕೆ 22 ಕೋಟಿ ರೂಪಾಯಿಗಳಿಗೂ ಮೀರಿ ಇದೆ. ಆದುದರಿಂದ ಇದರ ಬಗ್ಗೆ ಸಮಗ್ರವಾದಂತಹ ಯೋಜನೆಯೊಂದನ್ನು ಸಿದ್ಧಪಡಿಸಿಕೊಂಡು ಬಸ್ ಘಟಕ ನಿರ್ಮಿಸುವುದರ ಬಗ್ಗೆ ಆಲೋಚನೆ ನನ್ನ ಮುಂದೆ ಇದೆ. ಮುಂದಿನ ದಿನಗಳಲ್ಲಿ ಅದನ್ನು ಕಾರ್ಯಗತಗೊಳಿಸುವ ಬಗ್ಗೆ ನಾವು ಪ್ರಯತ್ನ ಮಾಡುತ್ತೇವೆ.

ಭೂಮಾಪನಾ ನಕಾಶೆ

422 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೊಡಗು ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಭೂಮಾಪನ ನಕಾಶೆ ಹರಿದು ಹೋಗಿರುವ ವಿಚಾರ ಸರ್ಕಾರ ಗಮನಕ್ಕೆ ಬಂದಿದೆಯೇ?*